# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 02.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.ಸಿ ಆರ್ ಬಿ ರವರಿಂದ

ನಿಮ್ಮ ತಂದೆಯ ಹೆಸರು ಏನು ಎಂದರೆ ತಿಮ್ಮಯ್ಯ ಎಂದು ನುಡಿಯುತ್ತಾರೆ. ತಿಮ್ಮಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದರೆ 4 ಜನ ಎಂದು ನುಡಿಯುತ್ತಾರೆ. ಅವರು ಯಾರು ಎಂದರೆ ಸಿದ್ದರಾಮಯ್ಯ, ಹೊನ್ನಮ್ಮ, ನರಸಿಂಹಮೂರ್ತಿ ಮತ್ತು ನಾನು ಎಂದು ನುಡಿಯುತ್ತಾರೆ. ತಿಮ್ಮಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಇಬ್ಬರು ಹೆಂಡತಿಯರು ಸಾಕ್ಷಿ ಮುಂದುವರೆದು ತಿಮ್ಮಯ್ಯ ರವರ ಮೊದಲನೇ ಹೆಂಡತಿ ಗಂಗಮ್ಮ ರವರು ತೀರಿಕೊಂಡ ನಂತರ ಮಾಯಮ್ಮ ರವರನ್ನು ಮದುವೆಯಾಗಿದ್ದರು ಎಂದು ನುಡಿಯುತ್ತಾರೆ. ನರಸಿಂಹಮೂರ್ತಿ ಮತ್ತು ಸಿದ್ದರಾಮಯ್ಯ ರವರು ನಿಮ್ಮ ತಂದೆಯ ಮೊದಲನೇ ಹೆಂಡತಿಯ ಮಕ್ಕಳಾಗಿರುತ್ತಾರಾ ಅಥವಾ ಎರಡನೇ ಹೆಂಡತಿಯ ಮಕ್ಕಳಾಗಿರುತ್ತಾರಾ ಎಂದರೆ ಸಾಕ್ಷಿಯು ಮೊದಲನೆ ಹೆಂಡತಿಯ ಮಕ್ಕಳು ಎಂದು ನುಡಿಯುತ್ತಾರೆ. ನಿಮ್ಮ ತಾಯಿಯ ಹೆಸರು ಏನು ಎಂದರೆ ಸಾಕ್ಷಿಯು ಮಾಯಮ್ಮ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಮೊದಲನೇ ಹೆಂಡತಿ ಗಂಗಮ್ಮ ರವರ ಜೀವಿತ ಕಾಲದಲ್ಲಿಯೇ ನಿಮ್ಮ ತಂದೆ ಮಾಯಮ್ಮ ರವರನ್ನು ಎರಡನೇ ಮದುವೆಯಾಗಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾಯಿಯನ್ನು ತಿಮ್ಮಯ್ಯ ರವರು ಮದುವೆಯಾಗುವ ಮೊದಲೇ ಅವರ ಮೊದಲನೇ ಹೆಂಡತಿ ಗಂಗಮ್ಮ ರವರು ತೀರಿಕೊಂಡಿದ್ದರು ಎಂದು ತೋರಿಸುವ

ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಹೊನ್ನಮ್ಮ ಎಷ್ಟನೇ ಹೆಂಡತಿ ಮಗಳು ಎಂದರೆ ಸಾಕ್ಷಿಯು ಮೊದಲನೇ ಹೆಂಡತಿ ಮಗಳು ಎಂದು ನುಡಿಯುತ್ತಾರೆ.

2. ಎಷ್ಟು ಆಸ್ತಿಗಳಿಗೆ ದಾವಾ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು 3 ಸರ್ವೆ ನಂಬರ್ ಅಸ್ತಿಗೆ ಎಂದು ನುಡಿಯುತ್ತಾರೆ. ಆ ಆಸ್ತಿಗಳು ಯಾವ ಊರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಷತ್ರೆಮತ್ತಿಘಟ್ಟ ಗ್ರಾಮದ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಸರ್ವೆ ನಂಬರ್ ಏನು ಎಂದು ಹೇಳಲು ಅಗುತ್ತದಾ ಎಂದರೆ ಸಾಕ್ಷಿಯು ಸ.ನಂ.102/1 ರ 1 ಎಕರೆ 7 ಗುಂಟೆ, ಸ.ನಂ.109/2 ರ 1 ಎಕರೆ 22 ಗುಂಟೆ, ಸ.ನಂ.115/3 ರ 1 ಎಕರೆ 29 ಗುಂಟೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ತಿಮ್ಮಯ್ಯ ರವರ ತಂದೆಯ ಹೆಸರು ಏನು ಎಂದರೆ ದಾಸಪ್ಪ ಎಂದು ನುಡಿಯುತ್ತಾರೆ. ದಾಸಪ್ಪ ರವರ ತಂದೆಯ ಹೆಸರು ಏನು ಎಂದರೆ ಸಣ್ಣಯ್ಯ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ 2 ಮತ್ತು 3 ರ ಆಸ್ತಿಗಳನ್ನು ದಾಸಪ್ಪ ರವರು ಕೊಂಡುಕೊಂಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸಣ್ಣಯ್ಯ ರವರಿಂದ ದಾಸಪ್ಪ ರವರಿಗೆ ಮತ್ತು ದಾಸಪ್ಪ ರವರಿಗೆ ತಿಮ್ಮಯ್ಯ ರವರಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ಅನುಸೂಚಿ 2 ಮತ್ತು 3 ರ ಆಸ್ತಿಗಳನ್ನು ಕ್ರ ಯ ಪತ್ರದ ಮೂಲಕ ದಾಸಪ್ಪ ರವರು ಶುದ್ಧ ಕ್ರ ಯಕ್ಕೆ ಕೊಂಡಿದ್ದರು ಎಂದರೆ ಸರಿಯಲ್ಲ. ದಿಃ 27.04.1959 ರಲ್ಲಿ ದಾಸಪ್ಪ ರವರು ಅನುಸೂಚಿ 2 ಆಸ್ತಿಯನ್ನು ಶುದ್ಧ ಕ್ರ ಯಕ್ಕೆ ಕೊಂಡುಕೊಂಡಿದ್ದರು ಎಂದರೆ ಸರಿ. ದಿಃ 05.06.1962 ರಲ್ಲಿ ದಾಸಪ್ಪ ರವರು ಅನುಸೂಚಿ 3 ರ ಆಸ್ತಿಯನ್ನು ಶುದ್ಧ ಕ್ರ ಯಕ್ಕೆ ಕೊಂಡಿದ್ದರು ಎಂದರೆ ಸರಿ. ಅನುಸೂಚಿ 1 ರ ಆಸ್ತಿಯನ್ನು ನಿಮ್ಮ ತಂದೆ ಕ್ರ ಯ ಕೊಂಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾತ ತೀರಿಕೊಂಡ ನಂತರ ನಿಮ್ಮ ತಾತ ಕೊಂಡುಕೊಂಡಿದ್ದ ಅನುಸೂಚಿ 2 ಮತ್ತು 3 ಆಸ್ತಿಗೆ ನಿಮ್ಮ ತಂದೆ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು 3 ಐಟಂ ಆಸ್ತಿಗಳನ್ನು ಕೂಡ ನನ್ನ ತಾತನೆ ಕೊಂಡಕೊಂಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಾತ ತೀರಿಕೊಂಡ ನಂತರ ನಿಮ್ಮ ತಂದೆ 3 ಅನುಸೂಚಿ

ಸ್ವತ್ತುಗಳ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ನಿಮ್ಮ ತಂದೆಯ ಹೆಸರಿನಲ್ಲಿ ದಾವಾ ಅನುಸೂಚಿ ಸ್ವತ್ತುಗಳ ಖಾತೆ ಮತ್ತು ಪಹಣಿ ಇತ್ತು ಎಂದರೆ ಸರಿ. ಹೊನ್ನಮ್ಮ ನಿಮಗೆ ಏನಾಗಬೇಕು ಎಂದರೆ ಅಕ್ಕ ಎಂದು ನುಡಿಯುತ್ತಾರೆ. ಅವರು ಯಾವ ಊರಿನಲ್ಲಿ ವಾಸವಾಗಿದ್ದಾರೆ ಎಂದರೆ ತಿಪಟೂರಿನ, ಶಿವನಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಹೊನ್ನಮ್ಮ ರವರಿಗೆ ಈಗ ಸುಮಾರು 45 ವರ್ಷ ಎಂದರೆ ಸಾಕ್ಷಿ 50 ವರ್ಷ ಎಂದು ನುಡಿಯುತ್ತಾರೆ. ನಿಮಗೆ ಈಗ 35 ವರ್ಷ ಎಂದರೆ ಸಾಕ್ಷಿಯು 33 ವರ್ಷ ಎಂದು ನುಡಿಯುತ್ತಾರೆ. ನೀವು ಈಗ ಯಾವ ಊರಿನಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ನನ್ನ ಗಂಡನ ಮನೆಯಾದ ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿ, ಬಿದರೆ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಮದುವೆಯಾಗಿ ಎಷ್ಟು ವರ್ಷ ಅಗಿರುತ್ತದೆ ಎಂದರೆ ಸಾಕ್ಷಿಯು 5 ವರ್ಷ ಎಂದು ನುಡಿಯುತ್ತಾರೆ. ನೀವು ಮದುವೆಯಾದಾಗ ನಿಮ್ಮ ತಂದೆ ಜೀವಂತ ಇದ್ದರಾ ಎಂದರೆ ಸಾಕ್ಷಿಯು ತೀರಿಕೊಂಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಯಾವಾಗ ತೀರಿಕೊಂಡಿದ್ದರು ಎಂದರೆ ಸಾಕ್ಷಿಯು ದಿಃ 09.12.2010 ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಏನಾದರೂ ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ನೀವು ಮತ್ತು ನಿಮ್ಮ ತಾಯಿ ಬೇರೆ ಕಡೆ ವಾಸಮಾಡಿಕೊಂಡು ಇದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೆಲ್ಲಾ ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮೊದಲಿನಿಂದ ಕಷ್ಟ ಪಟ್ಟು ದುಡಿಮೆ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ನಿಮ್ಮ ತಂದೆ ಆರೋಗ್ಯದಿಂದ ಇದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಗೆ ಮೂರ್ತಪಿಂಡ ವಿಫಲವಾಗಿತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಆರೋಗ್ಯವಾಗಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆಗೆ ಆರೋಗ್ಯ ಸರಿ ಇರಲಿಲ್ಲ ಎಂದು ತೋರಿಸುವ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಕರೇಕುರಿಹಟ್ಟಿ ಗ್ರಾಮದಲ್ಲಿ ತೀರಿಕೊಂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು 3 ತಿಂಗಳಿನಿಂದ ಹಾಸಿಗೆ ಹಿಡಿದಿದ್ದರು ಮನೆಯಲ್ಲಿಯೇ ತೀರಿಕೊಂಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಆರೋಗ್ಯವಾಗಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ದಿಃ 09.12.2010 ರಂದು ಹೃದಯಾಘಾತದಿಂದ ತೀರಿಕೊಂಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ಇದ್ದಾಗಲೇ ನೀವು ಮತ್ತು ನಿಮ್ಮ ತಾಯಿ ಬೇರೆ ವಾಸವಾಗಿರುತ್ತೀರಿ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ತಾಯಿ ಬೇರೆ ವಾಸವಾಗಿದ್ದರಿಂದ ನಿಮ್ಮ ತಂದೆಯ ಕಷ್ಟ ಸುಖಕ್ಕೆ ನೀವು ಆಗುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ 3 ತಿಂಗಳು ಹಾಸಿಗೆ ಹಿಡಿದಿದ್ದಾಗ ನಾನು ಮತ್ತು ನನ್ನ ತಾಯಿ ನೋಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಕಷ್ಟ ಸುಖಗಳನ್ನು ಅವರ ಇಬ್ಬರು ಗಂಡು ಮಕ್ಕಳಾದ 2 ಮತ್ತು 4 ನೇ ಪ್ರತಿವಾದಿಯರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ತಾಯಿ ಇಬ್ಬರು ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ.

3. ದಾವಾ ಅನುಸೂಚಿ ಸ್ವತ್ತುಗಳನ್ನು ನಿಮ್ಮ ತಂದೆಯ ಜೊತೆ 2 ಮತ್ತು 4 ನೇ ಪ್ರತಿವಾದಿಯರು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆ ಅಭಿವೃದಿಪಡಿಸಿದ್ದರು ನಾನು ಮತ್ತು ನನ್ನ ತಾಯಿ ಜೊತೆಯಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಆರೋಗ್ಯದಿಂದ ಇದ್ದು ಅವರಿಗೆ ಬುದ್ದಿ ಶಕ್ತಿ ಇತ್ತು ಎಂದರೆ ಸರಿಯಲ್ಲ. ಅವರು ಓಡಾಡಿಕೊಂಡು ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರನ್ನು washroom ಗೆ ನಾವೇ ಎತ್ತಿಕೊಂಡು ಹೋಗಬೇಕಿತ್ತು ಅವರನ್ನು ಯಾರನ್ನು ಗುರುತಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅವರು ಆರೋಗ್ಯದಿಂದ ಇದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is  cross examined by defendant counsel fully .

Defendant counsel prays time for cross of Pw2.

Call on.25.11.2024.